ಎಂಜಿನಿಯರ್, ನನ್ನ ಅತ್ತೆ–ಮಾವನಿಗೆ ವಿನಿಯಾರ್ಡ್‌ಗಳಿವೆ, ಅವರು ಶ್ರೀಮಂತರು. ಅವರ ಸೊಸೆಯಾಗಿ ನಾನಿಂಥ ನಿಕೃಷ್ಟ ಕೆಲಸವನ್ನು ಮಾಡಬೇಕೆ!' ನಾನು ರೇಗಿದೆ.

'ಹಾಗಾದರೆ ನೀನೇನು?' ಮಾರ್ಕೋ ವ್ಯಂಗ್ಯವಾಡಿದ.

ನಾನು ಅವಮಾನವನ್ನು ನುಂಗಿಕೊಂಡು ಮೌನವಹಿಸಿದೆ. ನಾನು ನೌಕರಿಗಾಗಿ ಪ್ರಯತ್ನಿಸುತ್ತಲೇ ಇದ್ದೆ. ಯಾವ ನೌಕರಿಯೂ ಸಿಗುವಂತೆ ಕಾಣಲಿಲ್ಲ, ಯಾವುದಾದರೊಂದು ಕೋರ್ಸ್ ಮಾಡಿಕೊಳ್ಳಲು ಯೋಚಿಸಿದೆ. ಆದರೆ ಅದಕ್ಕೂ ಮೊದಲು ಡ್ಯಾನಿಶ್ ಭಾಷೆಯನ್ನು ವಿಧಿವತ್ತಾಗಿ ಕಲಿಯಬೇಕೆಂದು ಯೋಚಿಸಿದೆ. ಇಲ್ಲಿ ಎಲ್ಲಾ ಕೆಲಸಗಳು ಡ್ಯಾನಿಶ್ ಭಾಷೆಯಲ್ಲಿಯೇ ನಡೆಯುತ್ತವೆ. ಈ ದೇಶ ಆಂಗ್ಲ ಭಾಷೆಯ ಗುಲಾಮ ಅಲ್ಲ. ಅಮೆರಿಕದಲ್ಲಿ ನಾವು ಮೂರೇ ವರ್ಷ ಇರುವುದಾಗಿದ್ದರೆ, ನಾವು ಡೆನ್ಮಾರ್ಕ್ ಬಿಟ್ಟಿದ್ದು ಏಕೆ ಎಂದು ಮಾರ್ಕೋನನ್ನು ದೂಷಿಸುತ್ತಿದ್ದೆ. ನನಗೆ ಸಿಕ್ಕಿದ್ದ ನೌಕರಿಯನ್ನು ವ್ಯರ್ಥವಾಗಿಯೇ ಬಿಟ್ಟೆ, ಈಗ ಮತ್ತೆ ಹೊಸದಾಗಿ ತಳವೂರಲು ಕಷ್ಟವಾಗುತ್ತಿತ್ತು. ನಾನು ಮತ್ತೊಮ್ಮೆ ಶೂನ್ಯಕ್ಕೆ ಬಂದಿದ್ದೆ. ಎಲ್ಲವನ್ನೂ ಮತ್ತೆ ಆರಂಭಿಸಬೇಕಿತ್ತು.

ನನ್ನ ಜೀವನ ಮತ್ತು ನನ್ನ ಪರಿಸ್ಥಿತಿಗಳು ನನ್ನನ್ನು ಹೊಸ ಸವಾಲುಗಳು ಮತ್ತು ಹೊಸ ಸಮಸ್ಯೆಗಳಿಗೆ ಸಿಲುಕಿಸುತ್ತಿದ್ದವು. ನನ್ನ ಪ್ರಯತ್ನಗಳು ವ್ಯರ್ಥವಾಗುತ್ತಿದ್ದವು. ಏನು ಮಾಡಲಿ ಎಂಬ ಸುಳಿಯಲ್ಲಿದ್ದೆ. ಒಂದೂ ತಿಳಿಯುತ್ತಿರಲಿಲ್ಲ. ಮನಸ್ಸಿಗೆ ಬೇಸರವಾಗಿತ್ತು. ಅದೊಂದು ದಿನ ಸಂಜೆ ಮಾರ್ಕೋ ಕಚೇರಿಯಿಂದ ಬಂದು ಹೇಳಿದ ಸುದ್ದಿಯಿಂದ ಮನಸ್ಸು ಅರಳಿತು. ಅವನ ಕಂಪನಿ ಅವನನ್ನು ಬೆಂಗಳೂರಿಗೆ ಕಳುಹಿಸುತ್ತಿತ್ತು. ಇದನ್ನು ಕೇಳಿ ನಾನು 'ವಾಹ್...' ಎಂದು ಉದ್ಗರಿಸಿದೆ. ನನ್ನ ಸಂತಸಕ್ಕೆ ಎಲ್ಲೆಯೇ ಇರಲಿಲ್ಲ. ನಾವು ಭಾರತಕ್ಕೆ ಹೋಗುತ್ತಿದ್ದೇವೆ! ನನ್ನ ದೇಶವನ್ನು ತ್ಯಜಿಸಿ ಇಪ್ಪತ್ತು ವರ್ಷಗಳಾಗಿತ್ತು. ಭಾರತಕ್ಕೆ ಕುಟುಂಬದವರನ್ನು ಭೇಟಿಯಾಗಲು ಮಾತ್ರ ಹೋಗುತ್ತಿದ್ದೆ. ಈಗ ಅಲ್ಲಿಗೆ ಹೋಗಿ ನನ್ನ ಮನೆಯನ್ನು ಮಾಡುವ ಮತ್ತು ಅಲ್ಲಿ ವಾಸಿಸುವ ಕನಸಿನಿಂದ ರೋಮಾಂಚನಗೊಂಡೆ. ನಾನು ಅತ್ಯಂತ ಸಂತೋಷದಿಂದ ಮಾರ್ಕೋನನ್ನು ತಬ್ಬಿಕೊಂಡು, ಅವನನ್ನು ಚುಂಬಿಸಿದೆ.

'ಕ್ಯೂಟೀಪಾಯಿ, ಐ ಲವ್ ಯೂ' ಎಂದೆ.

ಡೆನ್ಮಾರ್ಕ್‌ನಲ್ಲಿ ಮತ್ತೆ ನೌಕರಿಯನ್ನು ಅರಸುವ ಮತ್ತು ಅಲ್ಲಿ ನನ್ನನ್ನು ನೆಲೆಯೂರಿಸಿಕೊಳ್ಳುವ ಜಂಜಾಟದಿಂದ ಮುಕ್ತಿ ಸಿಕ್ಕಿತು. ಮನುಷ್ಯನ ಸಂಘರ್ಷ ಒಂದು ಪರಿಹಾರಕ್ಕಾಗಿ ನಡೆಯುತ್ತದೆ. ಪರಿಹಾರ ತಾನಾಗಿಯೇ ಲಭಿಸಿದಾಗ, ಅದರಿಂದಾಗುವ ಸುಖದ ಅನುಭವ ಅವರ್ಣನೀಯ. ನಾನೀಗ ಇದೇ ಅನುಭವದಲ್ಲಿರಲು ಬಯಸುತ್ತೇನೆ. ನಾನು ಒಮ್ಮೆಲೆ ಮಾನಸಿಕ ಒತ್ತಡದಿಂದ ಮುಕ್ತಿಯನ್ನು ಪಡೆದೆ.

'ಆದರೆ ನಾವಲ್ಲಿಗೆ ಎರಡು ವರ್ಷಗಳಿಗೆ ಮಾತ್ರ ಹೋಗುತ್ತಿದ್ದೇವೆ' ಇದನ್ನು ಮಾರ್ಕೋ ನನಗೆ ಪದೇಪದೇ ನೆನಪಿಸುತ್ತಿದ್ದ.

'ಓಹ್, ಎರಡು ವರ್ಷ ದೀರ್ಘವಾಗಿರುತ್ತದೆ' ನಾನು ಪುಳಕಿತಳಾದೆ.

ನಾವು ನಮ್ಮ ಲಗ್ಗೇಜುಗಳನ್ನು ಪೂರ್ಣವಾಗಿ ಬಿಚ್ಚಿರಲಿಲ್ಲ, ಈಗ ಮತ್ತೆ ಪ್ಯಾಕ್ ಮಾಡಲಾರಂಭಿಸಿದೆವು. ರಟ್ಟುಗಳ ಡಬ್ಬಗಳಲ್ಲಿ ಮನೆ ಮುದುಡಿಕೊಳ್ಳುವುದು ವಿಚಿತ್ರವಾದ ಅನುಭವವನ್ನು ಕೊಡುತ್ತದೆ. ಈ ಆತ್ಮವಿಲ್ಲದ ಪ್ಯಾಕಿಂಗ್ ಸಾಮಗ್ರಿಗಳ ನಡುವೆ, ನಾನೂ ಒಂದು ವಸ್ತುವೆಂಬ ಭಾವನೆ ನನ್ನಲ್ಲಿ ಮೂಡುತ್ತದೆ. ಮುದುಡುವುದು, ಒಟ್ಟುಗೂಡಿಸುವುದು, ಸುತ್ತಿಕೊಳ್ಳುವುದು, ಅಡಗಿಸುವುದು – ಇವೆಲ್ಲಾ ನಿತ್ಯ ನಡೆಯುತ್ತವೆ. ನಾನು ಇವುಗಳ ನಡುವೆ ಕಳೆದುಹೋಗುತ್ತೇನೆ. ಮತ್ತೊಮ್ಮೆ ನನ್ನ ಭಾರತದಲ್ಲಿ ಈ ವಸ್ತುಗಳನ್ನು ಸಜ್ಜುಗೊಳಿಸಿ ಹೊಸ ಮನೆಯೊಂದನ್ನು ಸ್ಥಾಪಿಸುತ್ತೇನೆ.

ಹೊರಡುವ ಸಿದ್ಧತೆಯನ್ನು ಮಾಡುತ್ತಾ, ಅದೊಂದು ಮಧ್ಯಾಹ್ನ ನಾವು ವಿಮಾನ ಹಿಡಿದು ನಮ್ಮ ಕೆಲವು ಸೂಟ್‌ಕೇಸ್‌ಗಳೊಂದಿಗೆ ಕೋಪನ್‌ಹೇಗನ್‌ನಿಂದ ಬೆಂಗಳೂರಿಗೆ ಬಂದೆವು.

## ಭಾರತ (ಏಷಿಯಾ)

ಅತೀತದ ತುಣುಕೊಂದನ್ನು ನಮ್ಮ ಸ್ಮೃತಿಯಲ್ಲಿ ಸುರಕ್ಷಿತವಾಗಿಟ್ಟುಕೊಂಡಾಗ, ಅದು ಕಾಲದ ಸೀಮೆಯ ಆಚೆಗೆ ಹೋಗುತ್ತದೆ. ಕಾಲ ಎಲ್ಲಿಯೂ ನಿಲ್ಲುವುದಿಲ್ಲ. ನಾವು ನಮ್ಮ ದೇಶದಿಂದ ವರ್ಷಗಟ್ಟಲೆ ಹೊರಗಿರಲಿ ಅಥವಾ ಪರಿಸ್ಥಿತಿಗಳು ಬದಲಾಗಿರಲಿ, ನಮ್ಮ ಸ್ಮೃತಿಯಲ್ಲಿ ಆ ಕಾಲಖಂಡ ಸುರಕ್ಷಿತವಾಗಿರುತ್ತದೆ, ನಾವು ಅದರಂತೆಯೇ ಪದೇ ಪದೇ ಬದುಕಲು ಬಯಸುತ್ತೇವೆ.

ಭಾರತದಲ್ಲಿ ತುಂಬಾ ಬದಲಾವಣೆಯಾಗಿದೆ ಎಂದು ಅನ್ನಿಸಿತು. ಕೆಲವು ನನ್ನ ನೆನಪಿನಲ್ಲಿದ್ದಂತೆಯೇ ಸುರಕ್ಷಿತವಾಗಿದ್ದವು, ಕೆಲವು ತುಂಬಾ ಹಾಳಾಗಿದ್ದವು, ಕೆಲವು ಆಶ್ಚರ್ಯಕರವಾಗಿ ಉತ್ತಮವಾಗಿದ್ದವು.

ಭಾರತ ಹಲವು ಮಗ್ಗಲುಗಳಲ್ಲಿ ಕೌಶಲ್ಯದಿಂದ ಕಾರ್ಯವೆಸಗುತ್ತಿದೆ. ಅಭಿವೃದ್ಧಿಯನ್ನೂ ಹೊಂದುತ್ತಿದೆ. ನನ್ನ ಮೊಬೈಲ್ ಫೋನಿಗೆ ಇಂಡಿಯಾದ ಸಿಮ್ ಕಾರ್ಡ್ ಹಾಕಿಸಿಕೊಳ್ಳಬೇಕಿತ್ತು. ಬೆಂಗಳೂರಿಗೆ ಹೋದ ಮರುದಿನ ಸಿಮ್ ಕಾರ್ಡ್ ಹುಡುಕುತ್ತಾ ರಸ್ತೆಗಿಳಿದೆ. ಒಂದು ಮೊಬೈಲ್ ಅಂಗಡಿ ಸಿಕ್ಕಿತು. ಅಂಗಡಿಯ ಮಾಲೀಕ ನನಗೆ, ನೀವು ನಿಮ್ಮ ಮನೆಯ ವಿಳಾಸವನ್ನು ಸಾಕ್ಷಿಯ ರೂಪದಲ್ಲಿ ಕೊಡಬೇಕಾಗುತ್ತದೆ ಎಂದ. ನಾವಿನ್ನೂ ಹೊಟೇಲ್‌ನಲ್ಲಿ ಉಳಿದುಕೊಂಡಿದ್ದೆವು. ಹೀಗಾಗಿ ನನ್ನ ಬಳಿ ಕಾಯಂ ವಿಳಾಸವಿರಲಿಲ್ಲ. ಅಂಗಡಿಯವನು ಮೊಬೈಲ್ ಫೋನ್ ಮತ್ತು ಸಿಮ್ ಕಾರ್ಡ್‌ನ ಗಿರಾಕಿಯೊಬ್ಬನನ್ನು ಕಳೆದುಕೊಳ್ಳಲು ಬಯಸುತ್ತಿರಲಿಲ್ಲ, ಅದಕ್ಕೇ ಅವನು ಇದಕ್ಕೆ ಪರ್ಯಾಯವನ್ನು ಹುಡುಕಲು ಆರಂಭಿಸಿದ:

'ನಿಮ್ಮ ತಂದೆ–ತಾಯಿ...?'

'ಅವರು ನಿಧನರಾಗಿದ್ದಾರೆ'

'ಬ್ರದರ್ಸ್–ಸಿಸ್ಟರ್ಸ್?'

'ಅರಬ್ ದೇಶಗಳಲ್ಲಿದ್ದಾರೆ.'

'ಅತ್ತೆ–ಮಾವ?'

ಅವರು ಫ್ರಾನ್ಸ್‌ನಲ್ಲಿದ್ದಾರೆ.'

'ಯಾರಾದರು ಸಂಬಂಧಿಕರು... ಅಂದರೆ ಅವರ ಮನೆಯ ವಿಳಾಸವನ್ನು ನೀವು ಉಪಯೋಗಿಸುವಂಥ ಸಂಬಂಧಿಕರು...?'

'ಹಾಂ... ನೆನಪಾಯ್ತು... ನನ್ನ ಚಿಕ್ಕಪ್ಪನ ಮಗಳು ವಿಲ್ಲಿ ಬೆಂಗಳೂರಿನಲ್ಲಿರುತ್ತಾಳೆ.'

ಅಂಗಡಿಯವನು ತನ್ನ ಮೊಬೈಲನ್ನು ನನಗೆ ಕೊಡುತ್ತಾ ಹೇಳಿದ, 'ನಿಮ್ಮ ಕೆಲ್ಸ ಆಯ್ತು... ನಿಮ್ಮ ಕಸಿನ್ಸ್‌ಗೆ ಫೋನ್ ಮಾಡಿ...'

ನಾನು ಅವನಿಂದ ಫೋನ್ ಪಡೆದು ವಿಲ್ಲಿಗೆ ಫೋನ್ ಮಾಡಿದೆ. ವಿಲ್ಲಿ ತಮ್ಮ ಮನೆಯ ವಿಳಾಸವನ್ನು ಉಪಯೋಗಿಸಿಕೊಳ್ಳಲು ತಕ್ಷಣ ಒಪ್ಪಿದಳು. ಅಂಗಡಿಯವನು ತನ್ನ ಒಬ್ಬ ನೌಕರನನ್ನು ಅವಳ ಮನೆಗೆ ಕಳುಹಿಸಿದ, ಮುಂದಿನ ಔಪಚಾರಿಕತೆಯನ್ನು ಪೂರೈಸಿದ. ನನಗೆ ಅಂದೇ ಸಿಮ್ ಕಾರ್ಡ್ ಸಿಕ್ಕಿತು. ನನಗೆ ಸಂತೋಷದೊಂದಿಗೆ ಆಶ್ಚರ್ಯವೂ ಆಯಿತು. ಅಂಗಡಿಯವನಿಂದ ಇಂಥ ಅಪೇಕ್ಷೆಯನ್ನು ನಾನು ಡೆನ್ಮಾರ್ಕ್, ಅಮೆರಿಕದಲ್ಲಿ ನೋಡಲು ಸಾಧ್ಯವಿರಲಿಲ್ಲ. ಅಲ್ಲಿ ಎಲ್ಲಾ ಕೆಲಸಗಳು ಕಾನೂನು ಮತ್ತು ವ್ಯವಸ್ಥಿತವಾಗಿಯೇ ನಡೆಯುತ್ತವೆ; ಮಾನವೀಯ ಸಂವೇದನೆಗಳು ಲುಪ್ತವಾಗುತ್ತವೆ.

ನಾವು ವೈಟ್ ಫೀಲ್ಡಿನ ವಸತಿ ಪ್ರದೇಶದ ರೈಫಲ್ಸ್ ಪಾರ್ಕ್‌ನಲ್ಲಿ ಹೊಸ ಮನೆಯನ್ನು ಹಿಡಿದೆವು. ಮಾರ್ಕೋಗೆ ಇಲ್ಲಿಯ ವಾತಾವರಣ ಅಪರಿಚಿತ ಮತ್ತು ವಿಚಿತ್ರವಾಗಿತ್ತು. ಅವನು ಒಂದು ಭಿನ್ನವಾದ ಭೌತಿಕ ಮತ್ತು ಸಾಮಾಜಿಕ ವಾತಾವರಣಕ್ಕೆ ತನ್ನನ್ನು ಹೊಂದಿಸಿಕೊಳ್ಳಬೇಕಾಯಿತು. ಅವನು ಹೊಸ ವಾತಾವರಣಕ್ಕೆ ಹೊಂದಿಕೊಳ್ಳುತ್ತಿರುವುದನ್ನು ನೋಡಿ ನನಗೆ ನೆಮ್ಮದಿಯಾಯಿತು. ಅವನು ನನ್ನೊಂದಿಗೆ ತನ್ನ ಕಚೇರಿಯ ಸಹಕರ್ಮಿಗಳೊಂದಿಗೆ ನಡೆದ ದೈನಂದಿನ ವಿಷಯಗಳು ಮತ್ತು ಅನುಭವಗಳನ್ನು ಹಂಚಿಕೊಳ್ಳುತ್ತಿದ್ದ. ಇದರಿಂದಾಗಿ ಅವನಿಗೆ ಹೊಸ ನಗರದ ವಾತಾವರಣಕ್ಕೆ ಒಗ್ಗಿಕೊಳ್ಳಲು ಕಡಿಮೆ ಕಾಲಾವಕಾಶ ಹಿಡಿಯಿತು.

ವಾಸ್ತವವಾಗಿ, ನಮ್ಮ ಹೊಸ ಮನೆಯಲ್ಲಿ ನೆಲೆಸಲು ಕಡಿಮೆ ಸಮಯ ಹಿಡಿಯಿತು, ಏಕೆಂದರೆ ನಾವು ಸೇವೆಯನ್ನು ಕೊಡುವ ಕುಶಲ ಕೆಲಸಗಾರರನ್ನು ಬಾಡಿಗೆಗೆ ಪಡೆಯಬಹುದಿತ್ತು. ಅಲ್ಲದೆ ಅಕ್ಕಪಕ್ಕದವರು ಸಹ ಸಹಾಯ ಮಾಡುವಂಥವರಾಗಿದ್ದರು. ಗುಪ್ತಾ, ಜೋಶಿ, ಶರ್ಮಾ, ಭಾರದ್ವಾಜ, ಸೇಠ್, ಸೂರಿ, ಸಿಂಗ್, ಬ್ಯಾನರ್ಜಿ, ಗೋಲ್ಡ್‌ಸ್ಮಿತ್... ಹೀಗೆ ನಾನಾ ಪ್ರಾಂತ್ಯದ ಜನರು ಇಲ್ಲಿ ವಾಸಿಸುತ್ತಿದ್ದರು. ಬಾಗಿಲುಗಳ ಮೇಲೆ ಎಲ್ಲರ ನೇಮ್‌ಪ್ಲೇಟ್‌ಗಳಿದ್ದವು. ಇಲ್ಲಿ ಸರಾಸರಿ ನಲ್ವತ್ತರಷ್ಟು ಪರಿವಾರದವರು ವಿದೇಶದಲ್ಲಿ ವಾಸವಾಗಿದ್ದವರೂ ಇದ್ದರು. ಕೆಲವರು ಹತ್ತು ವರ್ಷ ಅಮೆರಿಕದಲ್ಲಿದ್ದು ಬಂದವರಿದ್ದರೆ, ಕೆಲವರು ದುಬೈ, ಜಪಾನ್ ಮತ್ತು ಯೂರೋಪಿನಲ್ಲಿದ್ದು ಬಂದವರಿದ್ದರು. ನಮಗೆ ನಮ್ಮಂಥವರು ಸಿಕ್ಕಿದ್ದರು. ನಮ್ಮ ಪರಿವಾರದ ಬಗ್ಗೆ ಜನರ ಗಮನ ನಿರಂತರವಾಗಿತ್ತು.